ಏನೋ. ಉಡುಪಿಗೂ ಆ ಹೆಸರು ಸಿದ್ಧಿಸುವುದಕ್ಕೆ ಉಡುಪು ಅಂದರೆ ಬಟ್ಟೆಯೇ ಕಾರಣವಾಗಿರಬಹುದು.

ಬಟ್ಟೆ ಕಲೆಯೂ ಹೌದು, ಕೌಶಲವೂ ಹೌದು. ಉದ್ಯಮವೂ ಹೌದು. ಆದರೂ ಬಟ್ಟೆಯನ್ನು ಕಲೆ ಮಾಡಿಕೊಳ್ಳಬಾರದು. ಫ್ಯಾಷನ್ ಡಿಸೈನ್ ಎಂಬುದು ಬಟ್ಟೆಗೆ ಕೌಶಲ್ಯದ ಸ್ವರೂಪ ನೀಡಿದೆ. ಯಾವ ಸಂದರ್ಭದಲ್ಲಿ ಯಾವ ಬಟ್ಟೆ ಹಾಕಿಕೊಳ್ಳಬೇಕು? ಯಾವ ಸೀರೆಗೆ ಯಾವ ಬ್ಲೌಸ್ ಮ್ಯಾಚಿಂಗ್ ಇತ್ಯಾದಿ ಅಲಿಖಿತ ರೂಲ್ಸ್ ಕೂಡ ಮಹಿಳೆಯರಲ್ಲಿ ಜಾರಿಯಲ್ಲಿದೆ. ಕೆಲವೊಮ್ಮೆ ನಮ್ಮ ಸಂವಿಧಾನಕ್ಕೆ ತಿದ್ದುಪಡಿ ತಂದಂತೆ, ಈ ರೂಲ್ಸಿಗೂ ಕೂಡ ತಿದ್ದುಪಡಿಯಾಗಿ, ಬೇರೆ ಬೇರೆ ರೀತಿಯಲ್ಲಿ ಮ್ಯಾಚಿಂಗ್ ಬದಲಾಗುವುದನ್ನು ನಾವು ಗಮನಿಸಬಹುದು.

ಬಟ್ಟೆಯೆಂದರೆ ಕೆಲವರಿಗೆ ಅಗತ್ಯ. ಇನ್ನೂ ಕೆಲವರಿಗೆ ಫ್ಯಾಷನ್. ಇನ್ನಷ್ಟು ಮಂದಿಗೆ ತಮ್ಮ ದೌಲತ್ತಿನ ಪ್ರದರ್ಶನ. ಕೆಲವರಿಗೆ ಇತರರನ್ನು ಸೆಳೆಯಲು ಅಥವಾ ಇತರರಿಗೆ ಹೊಟ್ಟೆಕಿಚ್ಚು ಮೂಡಿಸಲು ದೊಡ್ಡ ಅಸ್ತ್ರ. ಬಣ್ಣ ಬಣ್ಣದ ಬಟ್ಟೆಗಳೆಂದರೆ ಮಕ್ಕಳಿಗಂತೂ ಪ್ರೀತಿ. ಮಹಿಳೆಯರಿಗಂತೂ ಇದು ಸೌಂದರ್ಯವರ್ಧಕ. ಹೀಗೆ ಅವರವರ ಭಾವಕ್ಕೆ ಅವರವರ ಬಟ್ಟೆ ಒದಗಿ ಬರುವುದು ವಿಶೇಷ.

ಶ್ರೀಮಂತ ಮನೆತನದವರ ಮದುವೆಗೆ ಹೋದರೆ ಇದು ಮದುವೆಯೋ ಅಥವಾ ಫ್ಯಾಷನ್ ಷೋನೋ ಎಂದು ದಿಗಿಲಾಗುತ್ತದೆ. ಏಕೆಂದರೆ ಮದುಮಗಳಿಗಿಂತ ಆಕೆಯ ಅಮ್ಮ, ದೊಡ್ಡಮ್ಮಂದಿರು ಸೀರೆ ಧರಿಸುವ, ಉಡುವಂಥ ಪರಿ ನೋಡಬೇಕು. ರಥೋತ್ಸವದ ರಥದಂತೆ ಅವರೇ ಎಲ್ಲೆಡೆ ರಾರಾಜಿಸುತ್ತಿರುತ್ತಾರೆ. ದಿಬ್ಬಣಕ್ಕೆ ಒಂದು ಬಣ್ಣದ ಸೀರೆಯಾದರೆ, ಮಂಟಪದಲ್ಲಿ ಧಾರೆ ಮುಹೂರ್ತಕ್ಕೆ ಇನ್ನೊಂದು ಬಣ್ಣದ ಸೀರೆ. ನಂತರ ಊಟದ ಸಂದರ್ಭಕ್ಕೆ ಒಂದು ಸೀರೆಯಾದರೆ, ಉಡುಗೊರೆ ವೇಳೆಗೆ ಮತ್ತೊಂದು ಸೀರೆ, ರಿಸೆಪ್ಷನ್‌ಗೆ ಇನ್ನೊಂದು ಸೀರೆ ಎನ್ನುತ್ತಾ ಅವರು ಫೋಟೊಗಳಿಗೆ, ನೆಂಟರಿಷ್ಟರಿಗೆ ಪೋಸ್ ಕೊಡುತ್ತಾರೆ. ಸೀರೆ ಬಿಚ್ಚಿ ಬದಲಾಯಿಸುವುದೇ ಅವರ ಮುಖ್ಯ ಕೆಲಸದಂತೆ ತೋರ್ಪಡಿಸಿಕೊಳ್ಳುತ್ತಾರೆ. ಸಾಮಾನ್ಯವಾಗಿ ಗಂಡಸರಿಗಾದರೆ ಅಲ್ಲಿ ಇಸ್ಪೀಟಿನ ಮಂಡಲವಿದ್ದರೆ ತಮ್ಮ ಅರಿವೆಗಳ ಮೇಲೆಯೇ ಅರಿವಿರುವುದಿಲ್ಲ. ಹೀಗಾಗಿ ನಮ್ಮ ಹಳ್ಳಿಯಲ್ಲಿ ಒಂದು ಮಾತು ಹೇಳುತ್ತಿದ್ದರು. ಊರಿನಲ್ಲಿ ಮದುವೆ ನಡೆದರೆ ಆಗ ಮದುವೆಯಲ್ಲಿ ವಧು ವರರಿಗೆ ಆಗುವ ಖುಷಿಗಿಂತ ಆ ಊರಿನಲ್ಲಿಯ ಜವಳಿ ಅಂಗಡಿ ಮಾಲೀಕನಿಗೆ ಆಗುವ ಖುಷಿಯೇ ಹೆಚ್ಚು, ಅವನಿಗೆ ಸ್ವರ್ಗದ ಬಾಗಿಲು ತೆರೆದಂತೆ. ಅಷ್ಟೊಂದು ಭರ್ಜರಿ ವ್ಯಾಪಾರ.

ಹೊಟ್ಟೆಗೂ ಬಟ್ಟೆಗೂ ಸದಾ ಜಟಾಪಟಿಯೇ. ಕೆಲವರ ಹೊಟ್ಟೆ ದೊಡ್ಡ ಹಂಡೆಯಂತಿರುವುದರಿಂದ ಅವರ ಹೊಟ್ಟೆಯ ಆಕಾರಕ್ಕೆ ತಕ್ಕದಾದ ರೆಡಿಮೇಡ್ ಬಟ್ಟೆ ಸಿಗುವುದು ಕೆಲವೊಮ್ಮೆ ಕಷ್ಟವೇ. ನಾವು ಚಿಕ್ಕವರಿರುವಾಗ ಅಂಗಿ ಹೊಲಿಸುವುದೆಂದರೆ ಪುಂಗಿ ಊದುವುದಕ್ಕಿಂತ ಕಷ್ಟವಾಗಿತ್ತು. ಏಕೆಂದರೆ ಆಗ ರೆಡಿಮೇಡ್ ಅಂಗಿ ಚಡ್ಡಿ, ಪ್ಯಾಂಟುಗಳು ಸಿಗುತ್ತಿರಲಿಲ್ಲ. ಬಟ್ಟೆಯನ್ನು ಜವಳಿ ಅಂಗಡಿಯಲ್ಲಿ ಖರೀದಿಸಿ ಟೈಲರ್ ಬಳಿಗೆ ತೆಗೆದುಕೊಂಡು ಹೋಗಿ ಅವನ ಮರ್ಜಿ ಕಾಯ್ದು ಹೊಲಿಸಿಕೊಂಡು ಬರಬೇಕಾಗುತ್ತಿತ್ತು. ಕೆಲವರು ಮದುವೆಗೆಂದು ಬಟ್ಟೆ ಖರೀದಿಸಿ ಟೈಲರ್ ಬಳಿ ಹೊಲಿಸಲು ಕೊಟ್ಟಾಗ, ಆ ಟೈಲರ್ ಕೈಕೊಟ್ಟು, ಮದುವೆ ಮುಗಿದು ಮಕ್ಕಳಾದ ಮೇಲೆ ಬಟ್ಟೆ ಹೊಲಿದು ಕೊಟ್ಟಂಥ ಎಡವಟ್ಟು ಪ್ರಸಂಗಗಳೂ ನಡೆದಿದ್ದುಂಟು. ಹೀಗೆ ಟೈಲರ್ ತಡವಾಗಿ ಬಟ್ಟೆ ಹೊಲಿದು ಕೊಟ್ಟಾಗ ಬಟ್ಟೆ ಕೊಟ್ಟವನ ಸೈಜೇ ಹೆಚ್ಚು ಕಡಿಮೆಯಾಗಿ ಗೊಟಾವಳಿಯಾಗಿದ್ದೂ ಇದೆ. ಆಗ ಬಟ್ಟೆ ಕೊಟ್ಟವನ ಸ್ಥಿತಿ ಕೋಡಂಗಿ.

ಹಳ್ಳಿಗಳಲ್ಲಿ ಮುಂಚೆ ಅವಿಭಕ್ತ ಕುಟುಂಬದ ಮನೆಯಲ್ಲಿ ನೂರಾರು ಮಂದಿ ಸದಸ್ಯರು ಇರುತ್ತಿದ್ದರು. ಅಂತಹ ಸಂದರ್ಭಗಳಲ್ಲಿ ಎಲ್ಲರಿಗೂ ಈಗಿನಂತೆ ರೆಡಿಮೇಡ್ ಬಟ್ಟೆಗಳನ್ನು, ದುಬಾರಿ ಬಟ್ಟೆಗಳನ್ನು ಯಜಮಾನನಾದವನಿಗೆ ಕೊಡಿಸಲು ಸಾಧ್ಯವಾಗುತ್ತಿರಲಿಲ್ಲ. ಹೀಗಾಗಿ ಜವಳಿ ಅಂಗಡಿಯವನನ್ನು ಮನೆಗೇ ಕರೆಸಿ, ಒಂದು ಟಾಕಿ ಬಟ್ಟೆಯನ್ನು ಒಂದೇ ರೀತಿಯ ಬಟ್ಟೆಯನ್ನು ತರಿಸಿಕೊಳ್ಳುತ್ತಿದ್ದರು. ಇದರಲ್ಲಿ ಅಂಗಿಯದ್ದು ಒಂದು ಟಾಕಿಯಾದರೆ ಅಂಡರ್ವೇರ್‌ಗಳದ್ದು ಮತ್ತೊಂದು ಬಣ್ಣದ ಟಾಕಿ. (ಟಾಕಿ ಎಂದರೆ ಬಟ್ಟೆಗಳನ್ನು ಸುತ್ತಿಡುವ ಕೋಲಿನಂತೆ ಬಟ್ಟೆ ಅಂಗಡಿಯಲ್ಲಿ ಇರುತ್ತಿತ್ತು.) ಮನೆಗೆ ಕರೆಸಿ ಎಲ್ಲಾ ಮಕ್ಕಳ ಅಳತೆ ತೆಗೆಸಿಕೊಂಡು ಬಟ್ಟೆ ಹೊಲಿಸುವುದು ಹಿಂದೆ ರೂಢಿಯಾಗಿತ್ತು. ಹೀಗಾಗಿ ಎಲ್ಲಾ ಮಕ್ಕಳಿಗೂ ಒಂದೇ ರೀತಿಯ, ಒಂದೇ ಬಣ್ಣದ ಅಂಡರ್ವೇರ್, ಚಡ್ಡಿ ಮತ್ತು ಅಂಗಿಗಳನ್ನು ಹೊಲಿಯಲಾಗುತ್ತಿತ್ತು. ಒಂದೇ ರೀತಿಯಲ್ಲಿ ಮಕ್ಕಳೆಲ್ಲ ಬಟ್ಟೆ ಧರಿಸುವುದರಿಂದ ಯಾರ ಮಕ್ಕಳು ಯಾರು ಎಂಬುದೇ ಕೆಲವೊಮ್ಮೆ ಗೊತ್ತಾಗದೇ ಅದಲು ಬದಲಾಗಿ ಫಜೀತಿಯಾಗುತ್ತಿತ್ತು. ಜೊತೆಗೆ ಕೆಲವರ ಅಂಡರ್ವೇರ್ ಮತ್ತೊಬ್ಬರ ಪ್ಯಾಂಟಿನೊಳಗೆ ಸೇರಿ ಅದಲು ಬದಲಾಗುತ್ತಿತ್ತು. ಈಗ ದೊಡ್ಡ ಕುಟುಂಬಗಳು ಒಡೆದು, ಚಿಕ್ಕಚಿಕ್ಕ ಕುಟುಂಬಗಳಾಗಿರುವುದರಿಂದ ಇಂತಹ ಸಮಸ್ಯೆ ಸ್ವಾರಸ್ಯಗಳು ನಡೆಯುವುದೇ ಅಪರೂಪ.

ಬಟ್ಟೆ ಯಾರಿಗೆ ಬೇಡ? ಭಟ್ಟರಿಗೂ ಬೇಕು, ಶೆಟ್ಟರಿಗೂ ಬೇಕು, ಭಟ್ಟಂಗಿಗಳಿಗೂ ಬೇಕು. ಬುಡುಬುಡಿಕೆಗಳಿಗೂ ಬೇಕು. ಇದರಿಂದಾಗಿ ಮನುಷ್ಯನ ಸಿಂಗಾರಕ್ಕಿರುವ ಬಟ್ಟೆಗಳಿಗೂ ಈಗ ಬಂಗಾರದ ಬೆಲೆ ಬರುವಂತಾಗಿದೆ. ಹೀಗಾಗಿ ಬಟ್ಟೆ ಬಿಟ್ಟರೆ ಎಲ್ಲಾ ಲೊಳಲೊಟ್ಟೆಯೇ.

ನಮ್ಮ ಸಂಸ್ಕೃತಿಯಲ್ಲಿ ಬಟ್ಟೆ ಎಂಬುದು ಎಷ್ಟೊಂದು ಸಮ್ಮಿಳಿತವಾಗಿದೆ ಎಂದರೆ ಈ ಬಟ್ಟೆಯಿಂದಲೇ ಕೆಲವರನ್ನು ನಾವು ಗುರುತಿಸಬಹುದು. ಉದಾಹರಣೆಗೆ ನೋಡಿ. ಹಿಂದೆ ಖಾದಿ ಬಟ್ಟೆ ಧರಿಸುವವರನ್ನು ಸ್ವಾತಂತ್ರ್ಯ ಹೋರಾಟಗಾರರು ಎಂದು ಗುರುತಿಸಲಾಗುತ್ತಿತ್ತು. ಕಾವಿ ಬಟ್ಟೆ ಧರಿಸಿದವರನ್ನು ಹೆಚ್ಚಾಗಿ ಸನ್ಯಾಸಿಗಳು, ಸಾಧು ಸಂತರು ಎಂದು ಭಾವಿಸಲಾಗುತ್ತಿತ್ತು. ಡಾನ್ಸರುಗಳು ತುಂಡುಡುಗೆ ಧರಿಸಿದರೆ ಕ್ಯಾಬರೆ ಎನ್ನಲಾಗುತ್ತಿತ್ತು. ಆದರೆ ಈಗ ನಗರಗಳಲ್ಲಿ ತುಂಡುಡುಗೆ ಧರಿಸಿ ಓಡಾಡುವವರಿಗೆ ಕ್ಯಾಬರೆ ಎಂದರೆ ಕಪಾಳಮೋಕ್ಷಕ್ಕೆ ಕಾರಣವಾದೀತು. ಅಪಾಯದ ಸೂಚಕವಾಗಿ ಕೆಂಪು ಬಟ್ಟೆಯನ್ನು, ಶಾಂತಿಯ ಸೂಚಕವಾಗಿ ಬಿಳಿ ಬಟ್ಟೆಯನ್ನು, ಪ್ರತಿಭಟನೆಯ ಸೂಚಕವಾಗಿ ಕಪ್ಪು ಬಟ್ಟೆಯನ್ನು ಜಗತ್ತಿನ ಎಲ್ಲೆಡೆ ಬಳಸುವ ಪರಿಪಾಟವಿದೆ. ನಮ್ಮಲ್ಲಿ ಹಸಿರು ಶಾಲು ಹೊದ್ದು ತಾವು ರೈತ ಸಂಘದವರು ಎಂದು ಗುರುತಿಸಿಕೊಳ್ಳುವ ಮಂದಿಯಿದ್ದಾರೆ.

ಬಟ್ಟೆ ನಮ್ಮ ಸಮಾಜದಲ್ಲಿ ಎಷ್ಟೊಂದು ಪರಿಣಾಮ ಬೀರಿದೆ ಎಂದರೆ ಬಟ್ಟೆಯನ್ನು ಹೆಂಡತಿಗೆ ಸಮಾನವಾಗಿ ಉಪಯೋಗಿಸುವುದು ಉಂಟು, ಅರ್ಧಾಂಗಿ ಎಂಬ ಶಬ್ದದಲ್ಲಿ ಅಂಗಿ ಇರುವುದರಿಂದ ಹೆಂಡತಿಯನ್ನು ಬಟ್ಟೆಯಷ್ಟೇ ಪ್ರಧಾನವಾಗಿ ವರ್ಣಿಸುವ ಬಳಕೆ ಬಂತೇನೋ. ವಾಸ್ತವವಾಗಿ ಹೆಂಡತಿಯು ಗಂಡನ ವ್ಯಕ್ತಿತ್ವವನ್ನು ಸಂಪೂರ್ಣ ಆವರಿಸಿಕೊಳ್ಳುವುದರಿಂದ ಅರ್ಧಾಂಗಿ ಎಂಬುವುದಕ್ಕಿಂತ ಉದ್ದಾಂಗಿ (ಉದ್ದ ಅಂಗಿ) ಎನ್ನುವುದೇ ಹೆಚ್ಚು ಸಮಂಜಸವೇನೋ.

ಕಚ್ಚೆ ಪಂಚೆಯ ಬಟ್ಟೆ ಧರಿಸಿದ ಗಂಡಸು ಹಿಂದೂ, ಹಿಜಾಬ್ ಧರಿಸಿದರೆ ಮುಸ್ಲಿಂ ಹೆಂಗಸು, ಸೊಳ್ಳೆ ಪರದೆ ರೀತಿಯ ಟೋಪಿ ಧರಿಸಿದರೆ ಮುಸ್ಲಿಂ ಎಂದು ಸುಲಭವಾಗಿ ಹೇಳುವಷ್ಟು ಬಟ್ಟೆ ಧರ್ಮವನ್ನೂ ವ್ಯಾಪಿಸಿಕೊಂಡಿದೆ. ದೇವಾಲಯಗಳಲ್ಲೂ ದೇವರಿಗೆ ಬಟ್ಟೆಯಿಂದ ಅಲಂಕಾರ ಮಾಡುವುದನ್ನು ನೋಡಿದಾಗ ನಾನು ಬರೆದಿದ್ದು:

ದೇವಾಲಯದಲ್ಲಿರೋ ದೇವರ
ತಲೆಗೂ ಭಕ್ತರು ಕಟ್ಟುತ್ತಾರೆ
ಮುಂಡಾಸು!
ಆದರೆ ಕಟ್ಟಿಸಿ ಕೊಡುವುದಿಲ್ಲ
ದೇವರಿಗೆ ಕನಿಷ್ಠ ಒಂದಾದರೂ
ಸಂಡಾಸು!

ಹೀಗೆ ಬಟ್ಟೆಯ ಬಹುಮುಖದ ಬಗ್ಗೆ ಹೇಳುವುದೆಂದರೆ ಅದು ದುಶ್ಯಾಸನ ಕಂಡಾಪಟ್ಟೆ ಬಟ್ಟೆ ಸೆಳೆದಂತೆಯೇ ಮುಗಿಯದ ಮಾತು. ದ್ರೌಪದಿಯ ಸೀರೆ ಬೆಳೆಯುವಂಥ ಸುದೀರ್ಘ ಕಥೆ ಈ ಬಟ್ಟೆಯದ್ದು! ಇಷ್ಟದ ಬಟ್ಟೆ ಹರಿದಾಗಲಂತೂ ದೊಡ್ಡ ವ್ಯಥೆ. ಆದರೂ ಬಟ್ಟೆ, ಬಹು ಸ್ವಾರಸ್ಯಗಳ ದೊಡ್ಡ ಅಣೆಕಟ್ಟೆಯೇ!



ಪ್ರತಿಕ್ರಿಯಿಸಿ: **feedback@sudha.co.in**